ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ-1

**ದಿಃ 17.09.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದಃ –**

ಪ್ರತಿವಾದಿಗಳ ಮೂಲ ಪುರುಷ ದೊಡ್ಡ ಬಸವಲಿಂಗಪ್ಪ ಎಂದರೆ ಸರಿಯಲ್ಲ ಬಸ್ಸಪ್ಪ ಎನ್ನುತ್ತಾರೆ. ದೊಡ್ಡ ಬಸ್ಸಪ್ಪನವರಿಗೆ ದೊಡ್ಡ ಬಸ್ಸಪ್ಪ ಮತ್ತು ಸಣ್ಣ ಬಸ್ಸಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಗೊತ್ತಿಲ್ಲಾ.ದೊಡಡ್ಡ ಬಸ್ಸಪ್ಪನವರಿಗೆ ಚನ್ನಪ್ಪ, ನಿಂಗಪ್ಪ ಮತ್ತು ಸಿದ್ದಲಿಂಗಪ್ಪ ಎನ್ನುವ ಮೂರು ಜನ ಮಕ್ಕಳು ಇದ್ದರು ಎಂದರೆ ಗೊತ್ತಿಲ್ಲಾ ಎನ್ನುತ್ತಾರೆ. ಸಿದ್ದಲಿಂಗಪ್ಪನವರ ಮಕ್ಕಳು ಯಾರು ಎಂದು ಗೊತ್ತಾ ಎಂದರೆ ರೇವಣಸಿದ್ದಪ್ಪ ಮತ್ತು ಈಶ್ವರಪ್ಪ ಎನ್ನುತ್ತಾರೆ. ರೇವಣಸಿದ್ದಪ್ಪನವರಿಗೆ ಎಷ್ಟು ಜನ ಮಕ್ಕಳು ಎಂದರೆ 6 ಜನ ಮಕ್ಕಳು ಅವರ ಹೆಸರು ಸಿದ್ದಲಿಂಗಪ್ಪ, ಬಸ್ಸಪ್ಪ, ಶರಣಮ್ಮ, ಹಾಲಮ್ಮ, ಬಸ್ಸಮ್ಮ, ತಿರುಕಮ್ಮ ಇರುತ್ತಾರೆ. ಸಣ್ಣ ಬಸ್ಸಪ್ಪನವರಿಗೆ ಎಷ್ಟು ಜನ ಮಕ್ಕಳು ಗೊತ್ತಾ ಎಂದರೆ ಗೊತ್ತಿಲ್ಲಾ ಎನ್ನುತ್ತಾರೆ. ಸಣ್ಣ ಬಸ್ಸಪ್ಪನವರಿಗೆ ಅಜ್ಜಪ್ಪ, ಬಸವಲಿಂಗಪ್ಪ ಮತ್ತು ಸಿದ್ದಪ್ಪ ಎನ್ನುವ ಮೂರು ಜನ ಮಕ್ಕಳು ಎಂದರೆ ಗೊತ್ತಿಲ್ಲಾ ಎನ್ನುತ್ತಾರೆ. ಅಜ್ಜಪ್ಪನವರಿಗೆ ಎಷ್ಟು ಜನ ಮಕ್ಕಳು ಗೊತ್ತಾ ಎಂದರೆ ಗೊತ್ತಿಲ್ಲಾ. ಬಸವಲಿಂಗಪ್ಪ ಮತ್ತು ಸಿದ್ದಪ್ಪನವರಿಗೆ ಎಷ್ಟು ಜನ ಮಕ್ಕಳು ಎಂದರೆ ಗೊತ್ತಿಲ್ಲಾ ಎನ್ನುತ್ತಾರೆ. ಅಜ್ಜಪ್ಪನವರಿಗೆ ಚನ್ನಪ್ಪ ಎನ್ನುವ ಒಬ್ಬ ಮಗ ಇದ್ದಾನೆಂದರೆ ಗೊತ್ತಿಲ್ಲಾ. ಚನ್ನಪ್ಪನ ಮಕ್ಕಳು ಯಾರು ಗೊತ್ತಾ ಎಂದರೆ ಗೊತ್ತು ಅವರ ಹೆಸರು ಬಸವರಾಜಪ್ಪ, ಹಾಲೇಶಪ್ಪ, ಅಜ್ಜಪ್ಪ, ಈಶಪ್ಪ ಕೊಟ್ರಪ್ಪ ದೇವಮ್ಮ ಮತ್ತು ಚಂದ್ರಮ್ಮ ಎನ್ನುತ್ತಾರೆ. ಬಸವರಾಜಪ್ಪ ಏನಾಗಬೇಕು ನಿಮಗೆ ಚಿಕ್ಕಪ್ಪ ಎನ್ನುತ್ತಾರೆ. ಬಸವರಾಜಪ್ಪ ನನ್ನ ಗಂಡನ ಅಕ್ಕನನ್ನು ಮದುವೆ ಆಗಿದ್ದಾರೆ ಎನ್ನುತ್ತಾರೆ. ದೊಡ್ಡ ಬಸ್ಸಪ್ಪ ಮತ್ತು ಸಣ್ಣ ಬಸ್ಸಪ್ಪನವರ ಮಕ್ಕಳು ಮತ್ತು ಅವರ ಮಕ್ಕಳು ಯಾವಾಗ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ಸದರಿಯವರು 1940-41 ಇಸ್ವಿಯಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ.

ದಾವಾ ಆಸ್ತಿ ಐಟಂ ನಂಬರ 1, ಸರ್ವೆ ನಂಬರ 135/ಎ 6 ಎಕರೆ 68 ಸೆಂಟ್ಸ ಇದು ದೊಡ್ಡಬಸ್ಸಪ್ಪನವರ ಮಗ ರೇವಣಸಿದ್ದಪ್ಪನವರ ಸ್ವಂತ ಆಸ್ತಿ ಎಂದರೆ ಸುಳ್ಳು. ಆ ಆಸ್ತಿ ರೇವಣಸಿದ್ದಪ್ಪನವರಿಗೆ ಹೇಗೆ ಬಂದು ಎಂದು ತಿಳಿದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲಾ. ದಾವಾ ಆಸ್ತಿ ಐಟಂ ನಂಬರ 1 ನ್ನು ರೇವಣಸಿದ್ದಪ್ಪನವರು ಅವರ ಸ್ವಂತ ಸಂಪಾದನೆ ಯಿಂದ ಖರೀದಿ ಮಾಡಿದ ಸ್ವಯಾರ್ಜಿತ ಆಸ್ತಿ ಎಂದರೆ ಗೊತ್ತಿಲ್ಲಾ. ಐಟಂ ನಂಬರ 2 ಸರ್ವೆ ನಂಬರ 339 ಇದರಲ್ಲಿ 13 ಎಕರೆ 93 ಸೆಂಟ್ಸನ್ನು ವಾದ ಪತ್ರದಲ್ಲಿ ತೋರಿಸಿದ್ದೀರಾ ಎಂದರೆ ಸಾಕ್ಷಿಯು ಮಹಾದೇವಮ್ಮ ತೋರಿಸಿದ್ದಾರೆ ನಾವು ಹೊಸದಾಗಿ ತೋರಿಸಿಲ್ಲಾ ಎನ್ನುತ್ತಾರೆ. ಸದರಿ 13 ಎಕರೆ 93 ಸೆಂಟ್ಸ ಜಮೀನು ಯಾರ ಹೆಸರಿಗೆ ಎಷ್ಟು ವಿಸ್ತೀರ್ಣಕ್ಕೆ ಆರ್ ಟಿ ಸಿ ಇದೆ ಎಂದು ನೋಡಿದ್ದೀರಾ ಎಂದರೆ ನೋಡಿರುವುದಿಲ್ಲ. 5 ಎಕರೆ 92 ಸೆಂಟ್ಸ ಜಮೀನು ತೆಂಬಲ ಸಿದ್ದಲಿಂಗಪ್ಪ ಅಂದರೆ ಈ ಕೇಸಿನ 2 ನೇ ಪ್ರತಿವಾದಿಯಾಗಿದ್ದು, ಅವರ ಹೆಸರಿಗೆ 5 ಎಕರೆ 92 ಸೆಂಟ್ಸ ಇದೆ ಎಂದು ಸಾಕ್ಷಿಗೆ ಈಗ ತೆರೆದ ನ್ಯಾಯಾಲಯದಲ್ಲಿ ಒಂದು ಆರ್ ಟಿ ಸಿ ಯನ್ನು ತೋರಿಸಿದಾಗ ಸದರಿ ಆರ್ ಟಿ ಸಿ ಹೌದು ಸರ್ವೆ ನಂಬರ 339/1, 5 ಎಕರೆ 92 ಸೆಂಟ್ಸ ಜಮೀನು ತೆಂಬಲ ಸಿದ್ದಲಿಂಗಪ್ಪ ನವರ ಹೆಸರಿನಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಆರ್ ಟಿ ಸಿ ಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಆರ್ ಟಿ ಸಿಯನ್ನು ತೋರಿಸಿದ ಸರ್ವೆ ನಂಬರ 339/2 , 2 ಎಕರೆ 65 ಸೆಂಟ್ಸ ಗುತ್ತೂರು ಸಿದ್ದಲಿಂಗಮ್ಮನವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಆರ್ ಟಿ ಸಿ ಯನ್ನು ನಿ ಡಿ 2 ಎಂದು ಗುರುತಿಸಲಾಯಿತು. ಮತ್ತೊಂದು ಆರ್ ಟಿ ಸಿ ಯನ್ನು ತೋರಿಸಿ ಸರ್ವೆ ನಂಬರ 339/3, 1 ಎಕರೆ 34 ಸೆಂಟ್ಸ ನಿಮ್ಮ ಚಿಕ್ಕಪ್ಪ ತೆಂಬಲ ಬಸವರಾಜಪ್ಪ ಬಿನ್ ಲೇಟ್ ಚನ್ನಪ್ಪನವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಆರ್ ಟಿ ಸಿಯನ್ನು ನೋಡಿ ಹೌದು ಎನ್ನುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಆರ್ ಟಿ ಸಿ ಯನ್ನು ನಿ ಡಿ 3 ಎಂದು ಗುರುತಿಸಲಾಯಿತು. ಸರ್ವೆ ನಂಬರ 339/4, 1 ಎಕರೆ 34 ಸೆಂಟ್ಸ ರೇವಮ್ಮ ಕೊಂ

ತೆಂಬಲ ಬಸವಲಿಂಗಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಆರ್ ಟಿ ಸಿ ಯನ್ನು ನಿ ಡಿ 4 ಎಂದು ಗುರುತಿಸಲಾಯಿತು. ಸರ್ವೆ ನಂಬರ 339/5, 1 ಎಕರೆ 34 ಸೆಂಟ್ಸ ತೆಂಬಲ ಸಿದ್ದಪ್ಪ ಲೇಟ್ ಸಿದ್ದಬಸ್ಸಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಮತ್ತು ಸಾಕ್ಷಿ ನೋಡಿ ಗುರುತಿಸಿದ ಆರ್ ಟಿ ಸಿ ಯನ್ನು ನಿ ಡಿ 5 ಎಂದು ಗುರುತಿಸಲಾಯಿತು. ಸರ್ವೆ ನಂಬರ 339/6, 1 ಎಕರೆ 34 ಸೆಂಟ್ಸ 1 ನೇ ಪ್ರತಿವಾದಿಯ ಗಂಡು ಮಕ್ಕಳ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಮತ್ತು ಸಾಕ್ಷಿ ನೋಡಿ ಗುರುತಿಸಿದ ಆರ್ ಟಿ ಸಿ ಯನ್ನು ನಿ ಡಿ 6 ಎಂದು ಗುರುತಿಸಲಾಯಿತು. ದಾವಾ ಆಸ್ತಿ ಐಟಂ ನಂಬರ 3, ಸರ್ವೆ ನಂಬರ 329, 8 ಎಕರೆ 36 ಗುಂಟೆ ಇದೆ ಎಂದು ತೋರಿಸಿದ್ದೀರಾ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡು ಮಕ್ಕಳ ಹೆಸರಿಗೆ 4 ಎಕರೆ 11 ಸೆಂಟ್ಸ ಜಮೀನು ಮಾತ್ರ ಇರುತ್ತದೆ ಎಂದರೆ ಸರಿ ಸಾಕ್ಷಿ ನೋಡಿ ಗುರುತಿಸಿದ ಆರ್ ಟಿ ಸಿ ಯನ್ನು ನಿ ಡಿ 7 ಎಂದು ಗುರುತಿಸಲಾಯಿತು. ದಾವಾ ಆಸ್ತಿ ಐಟಂ ನಂಬರ 4, ಸರ್ವೆ ನಂಬರ 46 ಜಿ , 12 ಎಕರೆ 36 ಗುಂಟೆ ಇದೆ ಎಂದು ತೋರಿಸಿದ್ದೀರಾ ಆದರೆ ಪಹಣಿಯಲ್ಲಿ 3 ಎಕರೆ 87 ಸೆಂಟ್ಸ ಮಾತ್ರ ನಮೂದು ಆಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ ಸಾಕ್ಷಿ ಗೆ ತೋರಿಸಿದ ಮತ್ತು ಸಾಕ್ಷಿ ನೋಡಿ ಗುರತಿಸಿದ ಆರ್ ಟಿ ಸಿ ಯನ್ನು ನಿ ಡಿ 8 ಎಂದು ಗುರುತಿಸಲಾಯಿತು. ದಾವಾ ಆಸ್ತಿ ಐಟಂ ನಂಬರ 5, ಸರ್ವೆ ನಂಬರ 107 ಬಿ , 9.00 ಎಕರೆ ಇದೆ ಎಂದು ತೋರಿಸಿದ್ದೀರಾ ಆದರೆ ಪಹಣಿಯಲ್ಲಿ 2 ಎಕರೆ 14 ಸೆಂಟ್ಸ ಮಾತ್ರ ನಮೂದು ಆಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ ಸಾಕ್ಷಿಗೆ ತೋರಿಸಿದ ಮತ್ತು ಸಾಕ್ಷಿ ನೋಡಿ ಗುರತಿಸಿದ ಆರ್ ಟಿ ಸಿ ಯನ್ನು ನಿ ಡಿ 9 ಎಂದು ಗುರುತಿಸಲಾಯಿತು.

ಮಹಾದೇವಮ್ಮ ಕಿತ್ತೂರಿನಲ್ಲಿ ಯಾವ ವಿಳಾಸದಲ್ಲಿ ವಾಸವಿದ್ದರು ಎಂದರೆ ನಮ್ಮ ಮನೆಯ ಇನ್ನೊಂದು ಸಣ್ಣ ಮನೆಯಲ್ಲಿ ಇದ್ದರು ಎನ್ನುತ್ತಾರೆ. ಅದರ ಡೋರ್ ನಂಬರ ಆಸ್ತಿ ನಂಬರ ಗೊತ್ತಾ ಎಂದರೆ ಗೊತ್ತಿಲ್ಲಾ. ಮಹಾದೇವಮ್ಮ ರವರ ಜೊತೆ ಯಾರು ವಾಸವಾಗಿದ್ದರು ಎಂದರೆ ಅವರು ಒಬ್ಬರೇ

ಇದ್ದರು ಎನ್ನುತ್ತಾರೆ. ಮಹಾದೇವಮ್ಮನವರಿಗೆ ನಿಮ್ಮನ್ನು ಬಿಟ್ಟರೇ ಬೇರೆ ಯಾರು ಸಂಬಂಧಿಕರು ಇದ್ದರು ಎಂದರೆ ಇದ್ದರು ಅವರು ಇಬ್ಬರು ತಮ್ಮಂದಿರು ಎನ್ನುತ್ತಾರೆ. ಅವರುಗಳ ಹೆಸರು ಗುರುಸಿದ್ದಪ್ಪ ಮತ್ತು ಪುಟ್ಟಪ್ಪ ಎನ್ನುತ್ತಾರೆ. ಸದರಿಯವರು ಈಗ ಜೀವಂತ ಇಲ್ಲಾ. ಸದರಿಯವರುಗಳಿಗೆ ಹೆಂಡತಿ ಮಕ್ಕಳು ಇದ್ದಾರೆ ಎಂದರೆ ಹೆಂಡತಿ ಇಲ್ಲ ಮಕ್ಕಳು ಇದ್ದಾರೆ ಎನ್ನುತ್ತಾರೆ. ಮಕ್ಕಳ ಹೆಸರು ಈಗಾಗಲೇ ಹೇಳಿದ್ದೇನೆ ಎನ್ನುತ್ತಾರೆ. ಮಹಾದೇವಮ್ಮನವರಿಗೆ ನಿಮ್ಮ ಮನೆಯಲ್ಲಿ ವಾಸವಾಗಿದ್ದರು ಊಟದ ವ್ಯವಸ್ಥೆ ಮಾಡುತ್ತಿದ್ರಿ ಎಂದರೆ ಪ್ರತಿದಿನ ಕೊಡುತ್ತಿರಲಿಲ್ಲ ಅವರೇ ಅಡುಗೆ ಮಾಡಿಕೊಂಡು ಊಟ ಮಾಡುತ್ತಿದ್ದರು, ನಮ್ಮ ಮನೆಯಲ್ಲಿ ವಾಸವಾಗಿರಲಿಲ್ಲ ಪಕ್ಕದಮನೆಯಲ್ಲಿ ವಾಸವಾಗಿದ್ದರು ಎನ್ನುತ್ತಾರೆ. ಎಷ್ಟು ವಯಸ್ಸಿನವರೆಗೆ ಅಡುಗೆ ಮಾಡುತ್ತಿದ್ದರು ಎಂದರೆ ಸುಮಾರು 80-85 ವರ್ಷದ ವರೆಗೆ ಅಡುಗೆ ಮಾಡಿಕೊಂಡು ಊಟ ಮಾಡುತ್ತಿದ್ದರು. ನಂತರ ನೀವೇ ಅವರಿಗೆ ಊಟ ಕೊಡುತ್ತಿದ್ರಿ ಎಂದರೆ ಹೌದು ಎನ್ನುತ್ತಾರೆ. ದಿನ ನಿತ್ಯದ ಕೆಲಸ ಕಾರ್ಯಗಳಿಗೆ ನಿಮ್ಮನ್ನು ಅವಲಂಬಿಸಿದ್ದರು ಎಂದರೆ ಇಲ್ಲಾ ಎನ್ನುತ್ತಾರೆ. ವಯಸ್ಸಾದ ಕಾರಣ ಅವರಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮಹಾದೇವಮ್ಮ 97-98 ನೇ ವಯಸ್ಸಿಗೆ ಮೃತ ಹೊಂದಿರುತ್ತಾರೆ.

**(2 ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.